FA/999386

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 668
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 23.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸಾರಿಗೆ ನೌಕರರ ಬೇಡಿಕೆಯಾದ 6 ನೇ ವೇತನವನ್ನು ಜಾರಿಗೊಳಿಸಲು ಪರಿಷ್ಕರಣೆ ಹಾಗೂ ಸಮಿತಿಯ ವರದಿಯು ಪರಿಶೀಲನೆಯಲ್ಲಿದೆಯೇ ; | ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 04 ಸಾರಿಗೆ ಸಂಸ್ಥೆಗಳು ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಆಂತರಿಕ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಆ. | ಹಾಗಿದ್ದಲ್ಲಿ; ಈ ಯೋಜನೆ ಜಾರಿಗೊಳಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದೇಕೆ; ಸಾರಿಗೆ ನೌಕರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋವಿಡ್-19ರ ಕಾರಣದಿಂದಾಗಿ ಹಾಗೂ ಇಂಧನ ದರದಲ್ಲಿನ ತೀವ್ರ ಹೆಚ್ಚಳದಿಂದಾಗಿ, ನಾಲ್ಕೂ ಸಾರಿಗೆ ಸಂಸ್ಥೆಗಳು ಸತತವಾಗಿ ನಷ್ಟದಲ್ಲಿರುತ್ತವೆ. ಆದಾಗ್ಯೂ, ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆ ಕುರಿತು ಸರ್ಕಾರದಲ್ಲಿ ಸ್ವೀಕೃತವಾಗಿರುವ ವರದಿಯನ್ನು ಪರಿಶೀಲಿಸಲಾಗುತ್ತಿದೆ. |
| ಇ. | ಸಾರಿಗೆ ನೌಕರರು ಕಳೆದ ಸಾಲಿನಲ್ಲಿ ಪ್ರತಿಭಟನೆಗೆ ಇಳಿದರೆಂಬ ಕಾರಣದಿಂದ ಅಮಾನತ್ತು ಡಿಸ್‌ಮಿಸ್ ಮಾಡಲಾಗಿರುವವರನ್ನು ಮತ್ತೆ ಸೇವೆಗೆ ಸೇರಿಸಿಕೊಳ್ಳದಿರಲು ಕಾರಣವೇನು; | ಕ.ರಾ.ರ.ಸಾ.ನಿಗಮ<br><br>ಸಾರಿಗೆ ನೌಕರರು ಕಳೆದ ಸಾಲಿನಲ್ಲಿ ನಡೆಸಿದ ಪ್ರತಿಭಟನಾ ಸಂದರ್ಭದಲ್ಲಿ ಅಮಾನತ್ತುಗೊಂಡ ಎಲ್ಲಾ ಸಿಬ್ಬಂದಿಗಳನ್ನು ಅಮಾನತ್ತಿನಿಂದ ತೆರವುಗೊಳಿಸಲಾಗಿದೆ ಹಾಗೂ ಸದರಿ ಪ್ರತಿಭಟನಾ ಸಂದರ್ಭದಲ್ಲಿ ಅನ್ಯ ಕಾರಣಗಳ ಮೇಲೆ ವಜಾಗೊಂಡ ಸಿಬ್ಬಂದಿಗಳು ವಜಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರಸ್ಥರಿಗೆ/ಸ್ವಯಂ ಪರಿಶೀಲನಾ ಪ್ರಾಧಿಕಾರಸ್ಥರಿಗೆ ಮೇಲ್ಮನವಿ/ಅರ್ಜಿಗಳನ್ನು ಸಲ್ಲಿಸಿದ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣದ ಅರ್ಹತೆಯ ಆಧಾರದ ಮೇಲೆ (on merits of the case), ಅರ್ಹ ಪ್ರಕರಣಗಳಲ್ಲಿ ಈಗಾಗಲೇ 11 ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಲಾಗಿದೆ.<br><br>ಬೆಂ.ಮ.ಸಾ.ಸಂಸ್ಥೆ |



ted from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM

ಮುಷ್ಕರದ ಸಮಯದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಿದ್ದ ನೌಕರರುಗಳನ್ನು ಅಮಾನತ್ತಿನಿಂದ ತೆರವುಗೊಳಿಸಿ ಸೇವೆಯ ಮೇಲೆ ನಿಯೋಜಿಸಲಾಗಿದೆ. ಸೇವೆಯಿಂದ ವಜಾಗೊಂಡಿರುವ ನೌಕರರುಗಳಿಗೆ ಸಂಸ್ಥೆಯಲ್ಲಿ ಲೋಕ್-ಅದಾಲತ್ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅವಕಾಶ ಕಲ್ಪಿಸಿದ್ದು, ಇದುವರೆವಿಗೆ ಒಟ್ಟು 705 ನೌಕರರುಗಳನ್ನು ಸೇವೆಯಲ್ಲಿ ಪುನರ್ ನೇಮಕಗೊಳಿಸಲಾಗಿದೆ ಹಾಗೂ 556 ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇದ್ದು, ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಲಾಗುವುದು. ಉಳಿದ 93 ನೌಕರರುಗಳು ಸೇವೆಯಲ್ಲಿ ಪುನರ್ ನೇಮಕಾತಿ ಕೋರಿ ಯಾವುದೇ ಮನವಿ ಸಲ್ಲಿಸಿರುವುದಿಲ್ಲ.

ವಾ.ಕ.ರ.ಸಾ.ಸಂಸ್ಥೆ

ಸಂಸ್ಥೆಯಲ್ಲಿ ಸಾರಿಗೆ ನೌಕರರ ಮುಷ್ಕರದ ಸಂದರ್ಭದಲ್ಲಿ ಅಮಾನತ್ತಿನಲ್ಲಿ ಇರಿಸಲಾದ ಎಲ್ಲಾ ಸಿಬ್ಬಂದಿಗಳನ್ನು ಅಮಾನತ್ತಿನಿಂದ ತೆರವುಗೊಳಿಸಿ ಸೇವೆಯಲ್ಲಿ ನಿಯೋಜಿಸಲಾಗಿದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಕಾರಣ ಬಾಗಲಕೋಟೆ ವಿಭಾಗದ ಒಟ್ಟು 07 ಸಿಬ್ಬಂದಿಗಳನ್ನು ವಜಾಗೊಳಿಸಿದ್ದು, ಸೇವೆಯಲ್ಲಿ ಮರುನೇಮಕಗೊಳಿಸಲು ಪರಿಗಣಿಸಿರುವುದಿಲ್ಲ.

ಕ.ಕ.ರ.ಸಾ.ನಿಗಮ

ಸಾರಿಗೆ ನೌಕರರು ಕಳೆದ ಸಾಲಿನಲ್ಲಿ ನಡೆಸಿದ ಮುಷ್ಕರದ ಸಂದರ್ಭದಲ್ಲಿ ಅಮಾನತ್ತುಗೊಂಡ ಎಲ್ಲಾ ಸಿಬ್ಬಂದಿಗಳನ್ನು ಅಮಾನತ್ತಿನಿಂದ ತೆರವುಗೊಳಿಸಲಾಗಿದೆ. ಮುಷ್ಕರದ ಸಂದರ್ಭದಲ್ಲಿ ಅನ್ಯ ಕಾರಣಗಳ ಮೇಲೆ 81 ಖಾಯಂ/ತರಬೇತಿ ನೌಕರರನ್ನು ಸೇವೆಯಿಂದ ವಜಾ/ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಅವರುಗಳ ಪೈಕಿ 13 ಜನ ನೌಕರರ ಮೇಲ್ಮನವಿಗಳನ್ನು ಪ್ರಾಧಿಕಾರಿಗಳು ಪರಿಗಣಿಸಿ ಸೇವೆಗೆ ಮರು ನೇಮಕ



led from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM

| | | |
|---|---|---|
| | | ಮಾಡಿರುತ್ತಾರೆ. 47 ಜನ ನೌಕರರ ಮನವಿಯನ್ನು ತಿರಸ್ಕರಿಸಲಾಗಿದೆ. 21 ಜನ ನೌಕರರು, ವಜಾ/ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ/ ದಯಾಯಾಚನಾ ಮನವಿಯನ್ನು ಈವರೆಗೂ ಸಲ್ಲಿಸಿರುವುದಿಲ್ಲ.<br><br>ಮುಷ್ಕರದ ಅವಧಿಯಲ್ಲಿ ಸೇವೆಯಿಂದ ವಜಾ/ತೆಗೆದುಹಾಕಲಾದ ನೌಕರರ ಪೈಕಿ 34 ಜನ ನೌಕರರು ವಜಾ ಆದೇಶವನ್ನು ಪ್ರಶ್ನಿಸಿ ಕಾರ್ಮಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸದರಿ ನೌಕರರನ್ನು ಲೋಕ್ ಅದಾಲತನಲ್ಲಿ ರಾಜಿ ಸಂಧಾನದ ಮೂಲಕ ಸದರಿ ನೌಕರರನ್ನು ಸೇವೆಯಲ್ಲಿ ಪುನರ್ ನೇಮಕ ಮಾಡಿಕೊಳ್ಳುವ ಕುರಿತು ಪರಿಶೀಲಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಇಲಾಖಾ ಮುಖ್ಯಸ್ಥರ ಸಮಿತಿ ರಚಿಸಿದ್ದು, ಸದರಿ ಸಮಿತಿಯು ಸಭೆ ಸೇರಿ ಪರಿಶೀಲಿಸಿ ಒಟ್ಟು 20 ಪ್ರಕರಣಗಳನ್ನು ಲೋಕ್ ಅದಾಲತನಲ್ಲಿ ಈಗಾಗಲೇ ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿರುತ್ತದೆ. ಬಾಕಿ ಇರುವ 14 ಪ್ರಕರಣಗಳು ಅತ್ಯಂತ ಗಂಭೀರ ಸ್ವರುಪದ ಪ್ರಕರಣಗಳಾಗಿದ್ದು, ಲೋಕ್ ಅದಾಲತನಲ್ಲಿ ಇತ್ಯರ್ಥಪಡಿಸಲಾಗಿರುವುದಿಲ್ಲ. |
| ಈ. | ಈ ನೌಕರರು ಅಮಾನತ್ತು, ಡಿಸ್‌ಮಿಸ್ ಆಗಲು ಮೂಲ ಕಾರಣಗಳೇನು; ಮತ್ತು ಇಂತಹ ನೌಕರರ ಸಂಖ್ಯೆ ಎಷ್ಟು ? | ಕ.ರಾ.ರ.ಸಾ.ನಿಗಮ<br><br>ಕರಾರಸಾ ನಿಗಮಕ್ಕೆ ಸಂಬಂಧಿಸಿದಂತೆ ಕಳೆದ ಸಾಲಿನ ಸಾರಿಗೆ ನೌಕರರ ಪ್ರತಿಭಟನಾ ಸಮಯದಲ್ಲಿ 281 ಸಿಬ್ಬಂದಿಗಳನ್ನು ಅಮಾನತ್ತು ಮಾಡಲಾಗಿದ್ದು, ಅದರಲ್ಲಿ 274 ಸಿಬ್ಬಂದಿಗಳನ್ನು ಮುಷ್ಕರದಲ್ಲಿ ಭಾಗಿಯಾದ ಕಾರಣಕ್ಕಾಗಿ ಹಾಗೂ ಉಳಿದ 07 ಸಿಬ್ಬಂದಿಗಳನ್ನು ಅನ್ಯ ಕಾರಣದ ಮೇಲೆ ಅಮಾನತ್ತು ಮಾಡಲಾಗಿರುತ್ತದೆ. ಮುಂದುವರೆದು, ಸದರಿ ಪ್ರತಿಭಟನಾ ಸಮಯದಲ್ಲಿ ಅನ್ಯ ಕಾರಣಗಳ ಮೇರೆಗೆ 74 ಸಿಬ್ಬಂದಿಗಳನ್ನು ವಜಾ ಮಾಡಲಾಗಿರುತ್ತದೆ.<br><br>ಮುಂದುವರೆದು, ತರಬೇತಿ ನೌಕರರುಗಳಿಗೆ |



ed from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM

ಸಂಬಂಧಿಸಿದಂತೆ, ಸಾರಿಗೆ ನೌಕರರ ಪ್ರತಿಭಟನಾ ಅವಧಿಯಲ್ಲಿ ಅನಧಿಕೃತವಾಗಿ ಗೈರುಹಾಜರಾದ ಸಂಬಂಧ/ಅಂತಿಮ ಆದೇಶಕ್ಕಾಗಿ ಬಾಕಿ ಇದ್ದ ಹಳೆಯ ಶಿಸ್ತು ಪ್ರರಕಣಗಳಲ್ಲಿ ನಿಗಮದ ವ್ಯಾಪ್ತಿಯ ಎಲ್ಲಾ ವಿಭಾಗಗಳಿಂದ ಒಟ್ಟು 324 ತರಬೇತಿ ನೌಕರರನ್ನು ಆಯ್ಕೆಪಟ್ಟಿಯಿಂದ ತೆಗೆದುಹಾಕಲಾಗಿರುತ್ತದೆ. ಈ ಪೈಕಿ 274 ತರಬೇತಿ ನೌಕರರು ಪುನರ್ ನೇಮಕ ಮಾಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಅದರಂತೆ, ದಯಾಯಾಚನಾ ಮನವಿ ಹಾಗೂ ಲೋಕ್ ಅದಾಲತ್ ತೀರ್ಮಾನದಂತೆ ಒಟ್ಟು 260 ತರಬೇತಿ ನೌಕರರನ್ನು ಸೇವೆಗೆ ಪುನರ್ ನೇಮಕಗೊಳಿಸಲಾಗಿರುತ್ತದೆ.

ಬೆಂ.ಮ.ಸಾ.ಸಂಸ್ಥೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ(ರಿ), ಗಾಂಧಿನಗರ, ಬೆಂಗಳೂರು ರವರು ದಿನಾಂಕ: 06.04.2021 ರಿಂದ 21.04.2021 ರವರೆಗೆ ಹಮ್ಮಿಕೊಂಡಿದ್ದ ಮುಷ್ಕರದ ಸಮಯದಲ್ಲಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದ ಹಿನ್ನಲೆಯಲ್ಲಿ, ಒಟ್ಟು 2440 ನೌಕರರುಗಳನ್ನು ಸೇವೆಯಿಂದ ಅಮಾನತ್ತು ಹಾಗೂ 1354 ನೌಕರರುಗಳನ್ನು ಸಂಸ್ಥೆಯ ಸೇವೆಯಿಂದ ವಜಾಗೊಳಿಸಲಾಗಿರುತ್ತದೆ.

ವಾ.ಕ.ರ.ಸಾ.ಸಂಸ್ಥೆ

ಅನಧೀಕೃತ ಗೈರು ಹಾಜರಾಗಿ ಮುಷ್ಕರದಲ್ಲಿ ಭಾಗವಹಿಸಿ ಸಂಸ್ಥೆಯ ನೌಕರನಲ್ಲದ ರೀತಿಯಲ್ಲಿ ವರ್ತಿಸಿ ತರಬೇತಿ ಹಾಗೂ ಪರೀಕ್ಷಾರ್ಥಿ ಸೇವೆಯ ಮೇಲೆ ನಿಯೋಜನಾ ಆದೇಶ ಉಲ್ಲಂಘನೆ ಮತ್ತು ಸಂಸ್ಥೆಯ ಘನತೆಗೆ ಧಕ್ಕೆ ಉಂಟುಮಾಡಿರುವ ಹಿನ್ನಲೆಯಲ್ಲಿ, ಸಂಸ್ಥೆಯಲ್ಲಿ ಒಟ್ಟು 61 ಸಿಬ್ಬಂದಿಗಳನ್ನು ಅಮಾನತ್ತು ಮಾಡಲಾಗಿದೆ ಹಾಗೂ ಒಟ್ಟು 336 ಸಿಬ್ಬಂದಿಗಳನ್ನು ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮುಂದುವರೆದಂತೆ ಈ ರೀತಿಯಲ್ಲಿ ವಜಾ, ಸೇವೆಯಿಂದ ಬಿಡುಗಡೆ



ated from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM

| | | |
|---|---|---|
| | | ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಸಿಬ್ಬಂದಿಗಳಲ್ಲಿ 308 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಇದರಲ್ಲಿ 290 ಮೇಲ್ಮನವಿಗಳನ್ನು ಪುರಸ್ಕರಿಸಿ ಸದರಿ ಸಿಬ್ಬಂದಿಗಳನ್ನು ಸೇವೆಯಲ್ಲಿ ಮರುನೇಮಕಗೊಳಿಸಲಾಗಿದೆ.<br>ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಬಾಗಲಕೋಟೆ ವಿಭಾಗದ ಒಟ್ಟು 07 ಸಿಬ್ಬಂದಿಗಳನ್ನು ಹಾಗೂ ಅನ್ಯ ಕಾರಣಗಳ ಈ ಹಿಂದಿನ ಪ್ರಕರಣಗಳಲ್ಲಿ ವಿಚಾರಣೆ ಕೈಗೊಂಡು ವಜಾಗೊಳಿಸಿದ ಸಿಬ್ಬಂದಿಗಳಿಗೆ ಸಂಬಂಧಿಸಿದ ಇನ್ನುಳಿದ ಮೇಲ್ಮನವಿಗಳನ್ನು ಅರ್ಹತೆಯ ಮೇಲೆ ಪರಿಗಣಿಸಿರುವುದಿಲ್ಲ.<br><br>ಕ.ಕ.ರ.ಸಾ.ನಿಗಮ<br><br>ಕ.ಕ.ರ.ಸಾ. ನಿಗಮಕ್ಕೆ ಸಂಬಂಧಿಸಿದಂತೆ, ಕಳೆದ ಸಾಲಿನ ಸಾರಿಗೆ ನೌಕರರ ಪ್ರತಿಭಟನಾ ಸಮಯದಲ್ಲಿ ಮುಷ್ಕರದಲ್ಲಿ ಭಾಗಿಯಾದ ಕಾರಣಕ್ಕಾಗಿ 63 ಸಿಬ್ಬಂದಿಗಳನ್ನು ಅನ್ಯ ಕಾರಣದ ಮೇಲೆ ಅಮಾನತ್ತು ಮಾಡಲಾಗಿರುತ್ತದೆ. ಮುಂದುವರೆದು ಸದರಿ ಪ್ರತಿಭಟನಾ ಸಮಯದಲ್ಲಿ ಮುಷ್ಕರದ ಪೂರ್ವದಲ್ಲಿ ಹಾಗೂ ಮುಷ್ಕರದ ಸಮಯದಲ್ಲಿ ಗಂಬೀರ, ಅಪರಾಧ /ಗೈರು ಹಾಜರಿ/ಅಪಘಾತ ಹಾಗೂ ಇನ್ನಿತರ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇದ್ದು, ಅಂತಹ ಪ್ರಕರಣಗಳ ಗಂಭೀರತೆಯನ್ನು ಪರಿಗಣಿಸಿ ಶಿಸ್ತುಪಾಲನಾಧಿಕಾರಿ ಗಳು/ಸೂಕ್ತಾಧಿಕಾರಿಗಳು 60 ಖಾಯಂ, 21 ತರಬೇತಿ ಸೇರಿದಂತೆ ಒಟ್ಟು 81 ನೌಕರುಗಳನ್ನು ಸೇವೆಯಿಂದ ವಜಾಗೊಳಿಸಿ/ ಆಯ್ಕೆಪಟ್ಟಿಯಿಂದ ತೆಗೆದುಹಾಕಲಾಗಿರುತ್ತದೆ. |

ಸಂಖ್ಯೆ: ಟಿಡಿ 294 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM